

ಮದುವೆ ಮಾಡಿ ಈಗ ವ್ಯಥೆ ಪಡ್ತಿರೋದು. ಕಾಲಕ್ಕೆ ತಕ್ಕಂತೆ ನಾವೂ ಬದ್ಲಾಗಬೇಕು. ಇದ್ರೆ ಕಣ್ಣುರಿ ಹೋದ್ರೆ ಹೊಟ್ಟೆ ಉರಿ ಅನ್ನೊ ಜನಗಳ ಮಾತ್ನ ಎಲ್ಲಿಗೆ ಕಟ್ಟಿಕೊಳ್ತಿರ' ಅಂತೇಳಿ ಕಲಾವತಿಗೆ ಧೈರ್ಯ ಹೇಳಿದ ಸುಜಾತ, ಕಾರಿನಿಂದಿಳಿದು, 'ಲೇಟಾಗುತ್ತೆ, ಹೊರಡೋಣ್ವ ರೂಪಾ' ಎಂದು ಮೃದುವಾಗಿ ಕರೆದಳು. ಅಕ್ಕನ ಮಾತಿಗೆ ಮುಗುಳು ನಗೆಯ ಉತ್ತರ ನೀಡಿದ ರೂಪಾ ಕಾರಿನಲ್ಲಿ ಕುಳಿತಾಗ ಅವರ ಪಯಣ ಬೆಂಗಳೂರು ಕಡೆ ಸಾಗಿತು. 'ನಾವು ಬರ್ತಿದೀವಂತ ನಿನ್ನ ಫ್ರೆಂಡ್‌ಗೆ ಇನ್ನೊಂದ್ಸಲ ಫೋನ್ ಮಾಡಿ ಹೇಳಿಬಿಡು ಸುಜಿ' ಕಲಾವತಿ ಮುಂಜಾಗ್ರತೆಯಾಗಿ ಹೇಳಿದಳು. 'ಡೋಂಟ್‌ವರಿ ಚಿಗ. ನಾನಾಗಲೆ ತಿಳಿಸಿದಿನಿ. ನಮಗೋಸ್ಕರ ಇವತ್ತು ಜಾಸ್ತಿ ಜನಕ್ಕೆ ಟೋಕನ್ನೇ ಕೊಟ್ಟಿಲ್ವಂತೆ. ಅವಳು ಕ್ಲಿನಿಕ್ ಹತ್ತಿರ ನಮಗಾಗಿ ಕಾಯ್ತಾ ಇದಾಳೆ' ಎಂದು ಸುಜಾತ ಹೇಳಿದಾಗಲೇ ಕಲಾವತಿಯ ಮನಸು ಕುದುರುಬಾಟಿಗೆ ಬಂದಿತ್ತು.

'ನಿನ್ನ ಗೆಳತಿಯ ಕೈ ಗುಣದಿಂದ ನಮ್ಮ ರೂಪಾ ಮೊದಲಿನಂಗಾದ್ರೆ ಸಾಕು ಕಣೆ. ಆಗ್ತಾಳ?' ಅತೀವ ಆಶಾಭಾವನೆಯಿಂದ ಕೇಳಿದ ಕಲಾವತಿಯ